

# ಸೋನಾಕ್ಷಿ ಕಿರಿಕಿರಿ

ರಜನಿಕಾಂತ್ ಅಭಿನಯದ 'ಲಿಂಗಾ' ಸಿನಿಮಾದ ಚಿತ್ರೀಕರಣಕ್ಕಾಗಿ ಚಿತ್ರತಂಡ ಶಿವಮೊಗ್ಗದಲ್ಲಿ ವಾಸ್ತವ್ಯ ಹೂಡಿದೆ. ಚಿತ್ರಕ್ಕಾಗಿ ಭರ್ಜರಿ ಸೆಟ್ ನಿರ್ಮಿಸಿರುವುದು ರಾಷ್ಟ್ರೀಯ ಸುದ್ದಿ! ರಜನಿಕಾಂತ್ ಮತ್ತು ನಾಯಕಿ ಸೋನಾಕ್ಷಿ ಸಿನ್ಹಾರನ್ನು ನೋಡಲು ಅಭಿಮಾನಿಗಳು ಮುಗಿಬಿದ್ದು ಚಿತ್ರೀಕರಣದ ಸ್ಥಳಕ್ಕೆ ದೌಡಾಯಿಸುತ್ತಿದ್ದಾರೆ. ಅವರನ್ನೆಲ್ಲಾ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸಮಧಾನ ಪಡಿಸಿ ಕಳುಹಿಸುತ್ತಿದ್ದಾರೆ. ಆದರೆ ಸುದ್ದಿ ಅದಲ್ಲ.

ಅಷ್ಟು ದೂರದಿಂದ ವಿಶ್ವಪ್ರಸಿದ್ಧ ಜೋಗದ ಬಳಿ ಬಂದಿರುವ ನಟಿ ಸೋನಾಕ್ಷಿ ಸಿನ್ಹಾರಿಗೆ ತಮ್ಮೂರು ಬಿಟ್ಟು ಬಂದದ್ದಕ್ಕೆ ಬೇಸರವಾಗಿರಬೇಕು. ಇಲ್ಲಿ ತಮಗೆ ಕಲ್ಪಿಸಿಕೊಟ್ಟಿರುವ ವ್ಯವಸ್ಥೆ ಸರಿಯಾಗಿಲ್ಲ ಎಂದು ಕಿರಿಕಿರಿ ಮಾಡಿದ್ದಾರೆ. ಎಲ್ಲವೂ ಐಷಾರಾಮಿ ಆಗಿರಬೇಕೆಂದು ಬಯಸುವ ಮನಸುಗಳಿಗೆ 'ಹಿತಕರ' ಎನಿಸುವುದು ಸಿಗದಿದ್ದಾಗ ಹೀಗೆನ್ನಿಸುವುದು ಸಹಜವೇ. ಶಿವಮೊಗ್ಗದ ಹೋಟೆಲ್‌ನಲ್ಲಿ ಉಳಿದುಕೊಂಡಿರುವ ಸೋನಾಕ್ಷಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ 'ಓ ದೇವರೇ, ನಾನೇನು ಮಾಡಿದೆ? ಜಗತ್ತಿನ ಅತಿ ಕೆಟ್ಟ ಹೋಟೆಲನ್ನು ಹುಡುಕಿ, ನನ್ನನ್ನು ಅಲ್ಲಿ ಇರಿಸಿದ್ದೀಯಾ?' ಎಂದು ಬರೆದುಕೊಂಡಿದ್ದರಂತೆ. ಆದರೆ ಈ ಮಾತು ವಿವಾದ ಸೃಷ್ಟಿಸುವ ಸಾಧ್ಯತೆ ಕಂಡ ಕೂಡಲೇ ಅದನ್ನು ಅಳಿಸಿಹಾಕಿದರಂತೆ. ಮೊಬೈಲ್ ಫೋನ್, ವೈಫೈ ನೆಟ್‌ವರ್ಕ್‌ಗಳು ಸಿಗದ ಜಾಗದಲ್ಲಿದ್ದೇನೆ ಎಂದು ಅಲವತ್ತುಕೊಳ್ಳುತ್ತಿದ್ದಾರಂತೆ ಸೋನಾಕ್ಷಿ.

ಸಿನಿಮಾದಲ್ಲಿ ಬಡಕುಟುಂಬದಲ್ಲಿ ಹುಟ್ಟಿದವರ ಪಾತ್ರವಾದರೂ ನಾಯಕಿ ಮೈಮೇಲೆ ದುಬಾರಿ ಬೆಲೆಯ ಬಟ್ಟೆಯೇ ಇರುತ್ತದೆ. ಇನ್ನು ಮುಖದ ಮೇಲಿನ ಮೇಕಪ್ ತುಸುವೂ ಮಾಸುವಂತಿಲ್ಲ. ವಿಶ್ರಾಂತಿ ತೆಗೆದುಕೊಳ್ಳಲು ಸಕಲ ಸವಲತ್ತುವುಳ್ಳ ಕಾರಾವಾನ್ ಆಗಲೇಬೇಕು. ಊಟ ವಸತಿ ವಿಷಯದಲ್ಲಿ ಕೇಳುವಂತೆಯೇ ಇಲ್ಲ. ಇಷ್ಟೆಲ್ಲಾ ಅನುಕೂಲಗಳನ್ನು ಬಯಸುವ ನಟಿಯರು ಮಲೆನಾಡಿಗೆ ಬಂದು ಐಷಾರಾಮದ ವ್ಯವಸ್ಥೆ ಬಯಸಿದರೆ ಎಲ್ಲಿಂದ ತಂದುಕೊಡುವುದು? ನಾಯಕ, ನಾಯಕಿ ಮಾತ್ರವಲ್ಲ, ಇಡೀ ಚಿತ್ರತಂಡಕ್ಕೆ ಅತಿ ಉತ್ತಮ, ಸುಸಜ್ಜಿತವಾದ ವಸತಿ ವ್ಯವಸ್ಥೆಗಳನ್ನೇ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕಲ್ಪಿಸಿದ್ದಾರಂತೆ. ರಜನಿಕಾಂತ್‌ರಂಥ ನಟರ ಜತೆ ನಟಿಸುವ ಅವಕಾಶ ಸಿಗುವುದೇ ಪುಣ್ಯ. ಅಂಥದ್ದರಲ್ಲಿ ಸೋನಾಕ್ಷಿಯ ಈ ಬಗೆಯ ತಕರಾರುಗಳು ಆಕೆಯ ಅಹಮ್ಮಿಕೆ ತೋರಿಸುತ್ತದೆ ಎಂದು ಬಿ–ಟೌನ್ ಮಾತನಾಡಿಕೊಳ್ಳುತ್ತಿದೆ.



# ಕತ್ರೀನಾ-ರಣಬೀರ್ ಬರೀ ಫ್ರೆಂಡ್ಸ್ ಅಂತೆ!

ಮೊನ್ನೆ ಮೊನ್ನೆವರೆಗೂ ಇನ್ನೇನು ಮದುವೆಯೇ ಆಗಿಬಿಟ್ಟರು ಎಂಬಂತೆ ಬಿ–ಟೌನ್‌ನ ಗಲ್ಲಿಗಳಲ್ಲಿ ಗಾಳಿಮಾತು ಕೇಳಿಬರುತ್ತಿತ್ತು. ಊರು ಕೇರಿ, ದೇಶಗಳನ್ನೆಲ್ಲಾ ಒಟ್ಟಿಗೆ ಸುತ್ತಿದ ಮೇಲೆ ಮದುವೆ ಆಗದೆಯೇ ಇರುತ್ತಾರಾ? ಅದೂ ಪ್ರೇಮದ ಉತ್ತುಂಗದಲ್ಲಿ ಇರುವಾಗ... 'ಅದೆಲ್ಲಾ ಏನೂ ಇಲ್ಲ. ಕತ್ರೀನಾ ಕೈಫ್ ಮತ್ತು ನಾನು ಬಹಳ ವರ್ಷಗಳಿಂದ ಪರಿಚಯ. ನಾವಿಬ್ಬರೂ ಹಳೆಯ ಸ್ನೇಹಿತರಷ್ಟೇ' ಎಂದು ಹೇಳಿದ್ದಾರೆ ರಣಬೀರ್ ಕಪೂರ್.





ಮದುವೆ ಮತ್ತು ಪ್ರೇಮ ಪ್ರಕರಣದ ಸುದ್ದಿ ಎರಡನ್ನೂ ಸಾರಾಸಗಟಾಗಿ ತಳ್ಳಿಹಾಕಿದ್ದಾರೆ ರಣಬೀರ್. ಇನ್ನು ಎರಡು–ಮೂರು ವರ್ಷ ಮದುವೆ ಬಗ್ಗೆ ಚಿಂತಿಸುವುದೇ ಇಲ್ಲ. ಸಿನಿಮಾದೊಂದಿಗೇ ಈಗ ಮದುವೆಯಾಗಿದ್ದೇನೆ. ಅದರ ಹೊರತಾಗಿ ಬೇರಾವ ಗುರಿ–ಗಮನವೂ ಮನಸಿನಲ್ಲಿ ಇಲ್ಲ ಎಂದಿದ್ದಾರೆ ಅವರು.

ಲಂಡನ್‌ನಲ್ಲಿರುವ ಕತ್ರೀನಾರ ತಾಯಿಯನ್ನು ಭೇಟಿ ಮಾಡಿರುವ ಸುದ್ದಿ ಬಗ್ಗೆ ಕೇಳಿದಾಗ, 'ಕತ್ರೀನಾ ಮತ್ತು ನಾನು ದೀರ್ಘಕಾಲದಿಂದ ಪರಿಚಿತರು. ಹಳೆ ಸ್ನೇಹಿತರು' ಎಂದಿದ್ದಾರೆ. ಈ ಹಿಂದೆ ತಮ್ಮ ಖಾಸಗಿ ಬದುಕಿನ ಬಗ್ಗೆ ಹೇಳಿಕೊಂಡು ಯಡವಟ್ಟು ಮಾಡಿಕೊಂಡಿದ್ದ ರಣಬೀರ್, ಆ ತಪ್ಪಿನಿಂದ ಪಾಠ ಕಲಿತಿರುವಂತಿದೆ. ಅದಕ್ಕೇ ಎಲ್ಲಾ ಗುಟ್ಟುಗಳನ್ನೂ ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಿದ್ದಾರೆ. ರೂಮರ್‌ಗಳಿಗೆ ತೇಪೆಗಳನ್ನು ಹಚ್ಚಿ ಸರಿಪಡಿಸಲು ನೋಡುತ್ತಿದ್ದಾರೆ– ಎನ್ನುತ್ತಿದ್ದಾರೆ ಬಾಲಿವುಡ್ ಪಂಡಿತರು! ಅವರಿಗೂ ಸುದ್ದಿಗಿಂತ ಗಾಸಿಪ್ಪೇ ಹೆಚ್ಚು ಇಷ್ಟ!

■ ಅಮಿ